# ಸಂಚಾರ ಸಾಥಿ ಸುತ್ತ...

**ದೇಶದೆಲ್ಲೆಡೆ ಸದ್ದು ಮಾಡಿದ್ದ ಸಂಚಾರ ಸಾಥಿ ಆ್ಯಪ್ ಅಳವಡಿಕೆ ಕಡ್ಡಾಯ ಮಾಡಿದ್ದ ಆದೇಶವನ್ನು ಕೇಂದ್ರ ಸರ್ಕಾರ ಈಚೆಗೆ ಹಿಂಪಡೆದಿದೆ.**

**■ ಶಶಿಕುಮಾರ್ ಸಿ.**

‘ಸಂಚಾರ ಸಾಥಿ’ ಆ್ಯಪ್ ಅಳವಡಿಕೆ ಕಡ್ಡಾಯ ಆದೇಶಕ್ಕೆ ದೇಶದೆಲ್ಲೆಡೆ ವ್ಯಾಪಕ ಆಕ್ಷೇಪ ವ್ಯಕ್ತವಾದ ಬಳಿಕ ಕೇಂದ್ರ ಸರ್ಕಾರವು ಈ ಆದೇಶವನ್ನು ಹಿಂಪಡೆದಿದೆ. ಟೆಲಿಕಾಂ ಸಂಬಂಧಿತ ವಂಚನೆಗಳಿಂದ ಬಳಕೆದಾರರಿಗೆ ಹೆಚ್ಚಿನ ಸುರಕ್ಷೆ ಒದಗಿಸುವ ನಿಟ್ಟಿನಲ್ಲಿ ಇದೊಂದು ಉತ್ತಮ ಕ್ರಮವೆಂಬುದು ಕೇಂದ್ರ ಸರ್ಕಾರದ ವಾದವಾಗಿತ್ತು.

ಆ್ಯಪಲ್, ಸ್ಯಾಮ್‌ಸಂಗ್ ಸೇರಿದಂತೆ ಭಾರತದಲ್ಲಿ ತಯಾರಾಗುವ ಮತ್ತು ಆಮದು ಮಾಡಿಕೊಳ್ಳಲಾಗುವ ಎಲ್ಲ ಮಾದರಿಯ ಸ್ಮಾರ್ಟ್‌ಫೋನ್ ಕಂಪನಿಗಳಿಗೆ ಈ ಆದೇಶ ಅನ್ವಯವಾಗಿತ್ತು. ‘ಸ್ಮಾರ್ಟ್‌ಫೋನ್‌ಗಳಲ್ಲಿ ಈ ಆ್ಯಪ್ ಇನ್‌ಬಿಲ್ಟ್ ಆಗಿಯೇ ಗ್ರಾಹಕರ ಕೈಸೇರಬೇಕು. ಈಗಾಗಲೇ ಮಾರುಕಟ್ಟೆಯಲ್ಲಿರುವ ಸ್ಮಾರ್ಟ್‌ಫೋನ್‌ಗಳಲ್ಲಿ ಮುಂದಿನ ಓಎಸ್ ಅಪ್‌ಡೇಟ್ ವೇಳೆ ಆ್ಯಪ್ ಅನ್ನು ಇನ್‌ಬಿಲ್ಟ್ ಆಗಿ ಒದಗಿಸಬೇಕು. ಆದೇಶ ಹೊರಡಿಸಿದ ದಿನಾಂಕದಿಂದ ಮುಂದಿನ 120 ದಿನಗಳ ಒಳಗೆ ಆ್ಯಪ್ ಇನ್‌ಸ್ಟಾಲ್ ಕುರಿತ ವರದಿಯನ್ನು ಸಚಿವಾಲಯಕ್ಕೆ ಸಲ್ಲಿಸಬೇಕು’ ಎಂಬುದನ್ನು ಆದೇಶದಲ್ಲಿ ಉಲ್ಲೇಖಿಸಲಾಗಿತ್ತು. ಈಗಾಗಲೇ ಗ್ರಾಹಕರ ಕೈಸೇರಿರುವ ಮೊಬೈಲ್ ಫೋನ್‌ಗಳಲ್ಲಿ ಈ ಆ್ಯಪ್ ಕಡ್ಡಾಯಗೊಳಿಸುವುದು ಹೇಗೆ ಎನ್ನುವುದರ ಬಗ್ಗೆ ಉಲ್ಲೇಖವಿರಲಿಲ್ಲ.

‘ಈ ಆ್ಯಪ್ ಸೈಬರ್ ಅಪರಾಧದ ವಿರುದ್ಧ ಮಾತ್ರ ಹೋರಾಡುತ್ತದೆ. ಬಳಕೆದಾರರ ಮೇಲೆ ಯಾವುದೇ ರೀತಿಯ ನಿಯಂತ್ರಣ ಹೊಂದಿರುವುದಿಲ್ಲ ಹಾಗೂ ಅವರ ಮೇಲೆ ನಿಗಾವಹಿಸುವುದಿಲ್ಲ. ಹೆಚ್ಚಿನ ಸುರಕ್ಷತೆಯನ್ನಷ್ಟೇ ಒದಗಿಸುತ್ತದೆ’ ಎಂಬುದು ಕೇಂದ್ರ ಸರ್ಕಾರದ ಅಭಿಪ್ರಾಯ.

### ವಿಪಕ್ಷಗಳ ವಿರೋಧ ಯಾಕೆ?

ಆ್ಯಪ್ ಅಳವಡಿಕೆ ಕಡ್ಡಾಯಕ್ಕೆ ವಿರೋಧ ಪಕ್ಷಗಳು ಕೇಂದ್ರ ಸರ್ಕಾರದ ವಿರುದ್ಧ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದವು. ‘ಕಣ್ಗಾವಲಿನಂತೆ ಕಾರ್ಯನಿರ್ವಹಿಸಲಿರುವ ಈ ಆ್ಯಪ್‌ನ ಬಳಕೆ ಕಡ್ಡಾಯ ಕ್ರಮವು ಸರ್ವಾಧಿಕಾರಕ್ಕೆ ಸಮನಾದದ್ದು’ ಎಂದು ಟೀಕಿಸಿದ್ದವು. ಕುತಂತ್ರಾಂಶಕ್ಕೆ ಸುದ್ದಿಯಾಗಿದ್ದ ಪೆಗಾಸಸ್ ಹಾಗೂ ರೆಡ್‌ಫ್ಲ್ಯಾಗ್‌ಗೆ ಈ ಆ್ಯಪ್ ಅನ್ನು ಹೋಲಿಕೆ ಮಾಡಿರುವ ವಿಪಕ್ಷಗಳ ನಿಲುವಿಗೆ ಕೇಂದ್ರ ಸರ್ಕಾರವು, ‘ಇದು ಬಳಕೆದಾರರ ಸುರಕ್ಷತೆಗೆ ಪರಿಚಯಿಸಲಾಗಿದೆ. ಬೇಡವೆಂದರೆ ಆ್ಯಪ್ ಅನ್‌ಇನ್‌ಸ್ಟಾಲ್ ಮಾಡಬಹುದು. ವಿಪಕ್ಷಗಳ ಆರೋಪದಲ್ಲಿ ಹುರುಳಿಲ್ಲ’ ಎಂದು ಮೊದಲು ಪ್ರತಿಕ್ರಿಯಿಸಿತ್ತು. ಆದರೆ, ದೂರಸಂಪರ್ಕ ಸಚಿವಾಲಯವು ಹೊರಡಿಸಿರುವ ಆದೇಶದಲ್ಲಿ ಅನ್‌ಇನ್‌ಸ್ಟಾಲ್ ಆಯ್ಕೆ ಬಗ್ಗೆ ಉಲ್ಲೇಖವಿರಲಿಲ್ಲ.




ಪ್ರಬಲ ವಿರೋಧಕ್ಕೆ ಮಣಿದಿರುವ ಕೇಂದ್ರ ಸರ್ಕಾರವು ಆದೇಶವನ್ನು ಹಿಂಪಡೆದಿದೆ. ಅಷ್ಟಕ್ಕೂ ಆದೇಶದಲ್ಲಿ ಏನಿತ್ತು ಮತ್ತು ಆ್ಯಪ್ ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ಇಲ್ಲಿ ತಿಳಿಯೋಣ.

### ಏನಿದು ಸಂಚಾರ ಸಾಥಿ?

ಕೇಂದ್ರ ಸರ್ಕಾರವು 2023ರಲ್ಲಿ ಈ ಆ್ಯಪ್ ಪರಿಚಯಿಸಿದ್ದು, ಈಚೆಗೆ ಇದರ ಪರಿಷ್ಕೃತ ಆವೃತ್ತಿಯನ್ನು ಬಿಡುಗಡೆ ಮಾಡಿದೆ. ನಾಗರಿಕ ಸೈಬರ್ ಭದ್ರತಾ ಸಾಧನವಾಗಿ ಇದು ಕಾರ್ಯನಿರ್ವಹಿಸಲಿದೆ. ‘ಸಂಚಾರ್ ಸಾಥಿ’ ಪೋರ್ಟಲ್‌ಗೆ ಪೂರಕವಾಗಿಯೇ ಕಾರ್ಯನಿರ್ವಹಿಸಲಿದೆ.

- ಕಳೆದುಹೋದ ಫೋನ್‌ಗಳನ್ನು ಪತ್ತೆ ಹಚ್ಚಲು ಮತ್ತು ಕದ್ದ ಫೋನ್‌ಗಳನ್ನು ನಿರ್ಬಂಧಿಸಲು ವೇದಿಕೆಯಾಗಲಿದೆ. ಫೋನ್‌ಗಳ ಅಂತರ ರಾಷ್ಟ್ರೀಯ ಮೊಬೈಲ್ ಗುರುತಿನ ಸಂಖ್ಯೆ (ಐಎಂಇಐ) ನಮೂದಿಸಿ ಅದನ್ನು ಕಪ್ಪುಪಟ್ಟಿಗೆ ಸೇರಿಸುವ ಮತ್ತು ನಿಷ್ಕ್ರಿಯಗೊಳಿಸುವ ಅವಕಾಶವು ಇದರಲ್ಲಿದೆ.
- ಐಎಂಇಐ ಸಂಖ್ಯೆಯನ್ನು ನಕಲು ಮಾಡಿ ಅಥವಾ ಟ್ಯಾಂಪರಿಂಗ್ ಮಾಡಿ ಸೈಬರ್ ಅಪರಾಧ, ಬ್ಯಾಂಕ್ ಖಾತೆ ದುರ್ಬಳಕೆ ಸೇರಿದಂತೆ ಹಲವು ಅಕ್ರಮ ಎಸಗುವ ಪ್ರಕರಣಗಳು ಸಾಕಷ್ಟು ನಡೆದಿವೆ ಮತ್ತು ನಡೆಯುತ್ತಿವೆ. ಹೊಸ ಮೊಬೈಲ್ ಫೋನ್‌ನ ಐಎಂಇಐ ಸಂಖ್ಯೆಯ ನೈಜತೆ ಪರಿಶೀಲಿಸಿ, ಖರೀದಿ ಮಾಡಲು ನೆರವಾಗಲಿದೆ.
- ಆಧಾರ್ ಕಾರ್ಡ್ ಅಥವಾ ಪಾಸ್‌ಪೋರ್ಟ್ ಬಳಸಿಕೊಂಡು ಅಕ್ರಮವಾಗಿ ಸಿಮ್ ಖರೀದಿ ಆಗಿರುವುದರ ಬಗ್ಗೆಯೂ ತಿಳಿಯಬಹುದು. ಒಂದು ವೇಳೆ ಬಳಕೆದಾರರ ಹೆಸರಿನಲ್ಲಿ ಬೇರೆಯವರು ಸಿಮ್ ಪಡೆದು ಬಳಸುತ್ತಿರುವುದು ಪತ್ತೆಯಾದರೆ, ಅದನ್ನೂ ಆ್ಯಪ್ ಮೂಲಕವೇ ನಿಷ್ಕ್ರಿಯಗೊಳಿಸಬಹುದು.
- ಸೈಬರ್ ಅಪರಾಧ, ಹಗರಣ, ಸ್ಪ್ಯಾಮ್ ಅಥವಾ ಅನುಮಾನಾಸ್ಪದ ಕರೆಗಳನ್ನೂ ವರದಿ ಮಾಡಬಹುದು. ಅನುಮಾನಾಸ್ಪದ ಅಥವಾ ವಂಚನೆಯ ಬಗ್ಗೆ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರಗಳಿಗೂ ವರದಿ ಸಲ್ಲಿಸಬಹುದು.

### ಕಂಪನಿಗಳ ಒಪ್ಪಿಗೆ ಇತ್ತೆ?

ಆದೇಶ ಪಾಲನೆಗೆ ಮೊಬೈಲ್ ತಯಾರಕ ಕಂಪನಿಗಳ ತಕರಾರೂ ಇತ್ತು. ಈ ಆದೇಶ ಪಾಲನೆಯನ್ನು ಆ್ಯಪಲ್ ಕಂಪನಿಯು ನಿರಾಕರಿಸಿ, ಈ ಸಂಬಂಧ ಸರ್ಕಾರಕ್ಕೆ ತನ್ನ ಸ್ಪಷ್ಟ ನಿಲುವು ತಿಳಿಸಿದೆ. ಆದರೆ, ಸ್ಯಾಮ್‌ಸಂಗ್ ಸೇರಿದಂತೆ ಉಳಿದ ಕೆಲ ಕಂಪನಿಗಳೂ ಚರ್ಚೆಗೆ ಮುಂದಾಗಿದ್ದವು. ಅಷ್ಟರಲ್ಲೇ ಕೇಂದ್ರ ಸರ್ಕಾರವು ತನ್ನ ನಿಲುವು ಸಡಿಲಿಸಿದೆ. ■

### ಆ್ಯಪ್ ಬಗ್ಗೆ ಕೇಂದ್ರ ಸರ್ಕಾರ ಹೇಳಿದ್ದಿಷ್ಟು...

- ಕಳೆದುಹೋದ ಅಥವಾ ಕಳ್ಳರ ಪಾಲಾಗಿದ್ದ 7,00,000ಕ್ಕೂ ಹೆಚ್ಚು ಫೋನ್‌ಗಳನ್ನು ಇದುವರೆಗೆ ಪತ್ತೆಹಚ್ಚಿ, ಮಾಲೀಕರಿಗೆ ವಿತರಿಸಲಾಗಿದೆ.
- 2025ರ ಅಕ್ಟೋಬರ್ ತಿಂಗಳಲ್ಲೇ ಸುಮಾರು 50,000 ಫೋನ್‌ಗಳನ್ನು ಪತ್ತೆಹಚ್ಚಲಾಗಿದೆ.
- ಕದ್ದ ಮತ್ತು ಕಳೆದುಹೋದ 3.7 ಮಿಲಿಯನ್ ಮೊಬೈಲ್ ಫೋನ್‌ಗಳನ್ನು ಇದುವರೆಗೆ ನಿಷ್ಕ್ರಿಯಗೊಳಿಸಲಾಗಿದೆ.
- 3 ಕೋಟಿಗೂ ಹೆಚ್ಚು ಅನಧಿಕೃತ ಸಿಮ್ ಸಂಪರ್ಕಗಳ ಕಡಿತ.
- 1 ಕೋಟಿಗೂ ಅಧಿಕ ಮಂದಿ ಈಗಾಗಲೇ ಈ ಆ್ಯಪ್ ಡೌನ್‌ಲೋಡ್ ಮಾಡಿಕೊಂಡು ಬಳಸುತ್ತಿದ್ದಾರೆ.
- ಸಂಚಾರ್ ಸಾಥಿ ಅಪ್ಲಿಕೇಶನ್ 22 ಪ್ರಾದೇಶಿಕ ಭಾಷೆಗಳಲ್ಲಿ ಲಭ್ಯವಿದೆ.